# ಅಧ್ಯಾಯ : 7

## ಉಪಸಂಹಾರ

ಇದುವರೆಗೆ ಹೊಸಗನ್ನಡ ಕಾವ್ಯದಲ್ಲಿ ಅಭಿವ್ಯಕ್ತವಾದ ಪ್ರತಿಮಾದೃಷ್ಟಿಯ ಬಗ್ಗೆ ವಿವರವಾದ ಪರಿಶೀಲನೆ ಮಾಡಿದಾಗಿದೆ. ಈ ಪರಿಶೀಲನೆಯಿಂದ ಕೆಲವು ವಿಚಾರಗಳು ಹೊರಪಡುತ್ತವೆ. ಆಧುನಿಕ ಕನ್ನಡ ಕಾವ್ಯದ ಎರಡು ಮುಖ್ಯಶಾಖೆಗಳೆನಿಸಿದ ನವೋದಯ ಮತ್ತು ನವ್ಯ ನಿರೂಪಣಾ ಮಾರ್ಗಗಳು ತಮ್ಮ ಪ್ರತಿಮಾಯೋಜನೆಯಲ್ಲಿಯೂ ಸ್ವವಿಶಿಷ್ಟವಾಗಿವೆ. ಕಾವ್ಯ ಜನಕ್ಕೆ ತಲಪಬೇಕೆನ್ನುವ ದೃಷ್ಟಿಯನ್ನು ವಿಶೇಷವಾಗುಳ್ಳ ನವೋದಯ ಕವಿಗಳ ಸುಲಭ ಸಂವಹನೆಯುಳ್ಳ ಪ್ರತಿಮೆಗಳಿಗೂ ಅನುಭವದ ಸ್ವರೂಪ ಸರಳಗೊಂಡೀತೆಂದು, ಅದರ ರಹಸ್ಯಮಯತೆ ನಷ್ಟವಾದೀತೆಂದು ಕಾವ್ಯಶರೀರದ ಹೊರಗೆ ಮಾತನಾಡುವುದನ್ನು ತಪ್ಪೆಂದು ಭಾವಿಸಿದ ನವ್ಯಕವಿಗಳ ಸಂವಹನಕ್ಲಿಷ್ಟ ಪ್ರತಿಮೆಗಳಿಗೂ ಸ್ಪಷ್ಟವಾದ ಅಂತರವಿದೆ. ಈವರೆಗಿನ ಪರಿಶೀಲನೆಯಿಂದ ವ್ಯಕ್ತವಾದಂತೆ ಈ ಎರಡೂ ಮಾರ್ಗಗಳ ಪ್ರತಿಮಾ ಸ್ವರೂಪದಲ್ಲಿರುವ ವ್ಯತ್ಯಾಸಗಳನ್ನು ಸ್ಥೂಲವಾಗಿ ಇಲ್ಲಿ ಸಂಗ್ರಹವಾಗಿ ಗಮನಿಸಬಹುದು.

ಐವತ್ತರ ದಶಕದಲ್ಲಿ ಕಾಣಿಸಿಕೊಂಡ ನವ್ಯಮಾರ್ಗ ಕನ್ನಡ ಕಾವ್ಯದ ಅಭಿವ್ಯಕ್ತಿಯಲ್ಲಿ ಎದ್ದು ಕಾಣುವ ಬದಲಾವಣೆ ತಂದಿತು. ಜೀವನವನ್ನು ನೋಡುವ, ತೂಗುವ, ಬೆಲೆ ಕಟ್ಟುವ ದೃಷ್ಟಿಯಲ್ಲಿಯೇ ಅಂತರ ಉಂಟಾಯಿತಾಗಿ ಕಾವ್ಯದ ಸ್ವರೂಪದಲ್ಲಿಯೂ ಮೌಲಿಕವಾದ ವ್ಯತ್ಯಾಸ ಕಾಣಿಸಿಕೊಂಡಿತು. ನವೋದಯ ಮಾರ್ಗದ ಒಂದು ಕವಿತೆಗೂ ನವ್ಯಮಾರ್ಗದ ಒಂದು ಕವಿತೆಗೂ ಇರುವ ವ್ಯತ್ಯಾಸ ಕವಿತೆಯ ಆಕಾರದಲ್ಲಿ ಕೂಡ ಒಡೆದು ಕಾಣುವ ಮಟ್ಟಿಗೆ ಅಭಿವ್ಯಕ್ತಿಯ ರೀತಿ ಬದಲಿತು. ನವೋದಯರು ಒಂದು ಅನುಭವವನ್ನು ಅದರ ಸುತ್ತಲ ಸಂದರ್ಭಗಳಿಂದ ಸ್ವತಂತ್ರಗೊಳಿಸಿ, ಸಂವೇದನೆಯ ಜಟಿಲತೆಯನ್ನು ನಿವಾರಿಸಿ, ತತ್ವದ ಅಮೂರ್ತತೆಗೆ ಅದನ್ನು ಎತ್ತರಿಸಿ ಗೇಯಲಯಬದ್ಧವಾದ ಆಕಾರದಲ್ಲಿ ಅದನ್ನು ರೂಪಿಸಿಕೊಡುತ್ತಿದ್ದರು. ನವ್ಯರು ಕಾವ್ಯದ ಬಗ್ಗೆ ರೂಪಿಸಿಕೊಂಡ ಹೊಸಧೋರಣೆ ಅವರ ಅಭಿವ್ಯಕ್ತಿ ಕ್ರಮದಲ್ಲಿ ಅನಿವಾರ್ಯವಾಗಿಯೇ ಬದಲಾವಣೆಯನ್ನು

ತಂದಿತು. ನವ್ಯರಿಗೆ ಕವಿತೆ ತತ್ವಸದೃಶವಾದ ವಿಚಾರಗಳ ವಾಹಕವಾಗಲಿ, ಅನುಭವವನ್ನು ವರ್ಣಿಸುವ ಉಪಕರಣವಾಗಲಿ ಆಗದೆ ತಮ್ಮ ಅನುಭವವನ್ನು ಶೋಧಿಸಿಕೊಳ್ಳುವ, ಅದನ್ನು ಭಾಷೆಯಲ್ಲಿ ಮೂರ್ತವಾಗಿ ಸೃಷ್ಟಿಸಿಕೊಡುವ ಕ್ರಿಯೆಯಾಯಿತು. ಹಿಂದೆ ವ್ಯಕ್ತಿನಿಷ್ಠವಾಗಿದ್ದ ಕಾವ್ಯವನ್ನು ಅದಷ್ಟು ವಸ್ತುನಿಷ್ಠವಾಗಿಸಬೇಕೆಂಬ ವಿಚಾರ ಹುಟ್ಟಿತು. ವಸ್ತುನಿಷ್ಠವಾದ ಮೂರ್ತಸೃಷ್ಟಿಯ ಧ್ಯೇಯ ಸಹಜವಾಗಿಯೇ ಪ್ರತಿಮಾಪ್ರಧಾನವಾದ ಕಾವ್ಯಕ್ಕೆ ದಾರಿಮಾಡಿತು.)

ಪ್ರತಿಮಾ ಸ್ವರೂಪದಲ್ಲಿ ಆಗಿರುವ ಬದಲಾವಣೆಯನ್ನು ಗಮನಿಸುವುದೆಂದರೆ ಪ್ರತಿಮಾಭಿವ್ಯಕ್ತಿಗೆ ಸಂಬಂಧಿಸುವ ಎಲ್ಲ ಅಂಶಗಳಲ್ಲಿ ಆಗಿರುವ ಬದಲಾವಣೆಯನ್ನೂ ಗಮನಿಸುವುದಾಗುತ್ತದೆ. ಪ್ರತಿಮಾರಚನೆ ತನಗೆ ತಾನೇ ಸ್ವತಂತ್ರವಾದದ್ದಲ್ಲ, ಅದರ ನಿರ್ಮಿತಿಯಲ್ಲಿ ಒದಗುವ ಸಾಮಗ್ರಿಗಳ ಸ್ವರೂಪದಿಂದ ನಿಯಂತ್ರಿತವಾದದ್ದು. ಬೇರೆ ಮಾತುಗಳಲ್ಲಿ ಹೇಳುವುದಾದರೆ ಅದಕ್ಕೆ ಬಳಸುವ ಭಾಷೆ, ವಸ್ತು, ಲಯ ಮತ್ತು (ಅನುಭವವನ್ನು ಬೆಳಗುವಲ್ಲಿ ಬಳಕೆಯಾಗುವ) ಜೀವನದೃಷ್ಟಿಗಳಿಂದ ರೂಪುಗೊಳ್ಳುವಂಥದು. (ನವೋದಯ ಕಾವ್ಯಕ್ಕೇ ವಿಶಿಷ್ಟವೆನಿಸಿದ್ದ ಕೆಲವು ಪದಪುಂಜಗಳು, ಸದೃಶ ಚಿತ್ರಾತ್ಮಕವಾದ ಪ್ರತಿಮೆಗಳು, ಲಯಕ್ರಮಗಳು, ವರ್ಣನಾ ಪ್ರಧಾನವಾದ ನಿರೂಪಣಾವಿಧಾನಗಳು — ಇವನ್ನೆಲ್ಲ ಬದಿಗೆ ಸರಿಸಿ ಪ್ರತ್ಯೇಕ ಪ್ರಕಟನ ರೀತಿಯೊಂದನ್ನು ನವ್ಯರು ರೂಪಿಸಿಕೊಂಡಿದ್ದಾರೆ. ಅವರ ಕವಿತೆಗಳ ಪ್ರತಿಮಾಶರೀರದಲ್ಲಿ ಸಂಸ್ಕೃತ ಇಂಗ್ಲಿಷ್ ಕಾವ್ಯಗಳಿಂದ ತೆಗೆದ ಉದ್ಧೃತವಾಕ್ಯಗಳು, ಸಾಹಿತ್ಯೇತರವಾದ ಮಡಿಮೈಲಿಗೆಯ ಪರಿಗಣನೆಯನ್ನು ಬಿಟ್ಟ ಪದಗಳು, ವಿಷಮಗಣ ಪಾದಗಳಿಂದ ಕೂಡಿದ, ಮತ್ತು ಆಡುಮಾತಿಗೆ ಹತ್ತಿರವಾದ ಲಯಕ್ರಮಗಳು, ಶಿಷ್ಟ ಅಶಿಷ್ಟ, ಸಭ್ಯ — ಅಸಭ್ಯ ಎಂಬ ಸಾಮಾಜಿಕ ಕಟ್ಟುಪಾಡುಗಳನ್ನು ಅಲಕ್ಷಿಸಿ ಕಾವ್ಯದೊಳಗೆ ಪ್ರವೇಶ ಪಡೆದ ಅನುಭವಗಳು ಬಳಕೆಯಾಗಿವೆ. ಇವುಗಳ ಬಲದಲ್ಲಿ ಕಟ್ಟಿದ ಪ್ರತಿಮೆಗಳ ಬಹಿರಂಗವೂ ಕಣ್ಣಿಗೆ ಬಡಿಯುವ ರೀತಿಯಲ್ಲಿ ಹಿಂದಿನ ಪ್ರತಿಮೆಗಳಿಂದ ಭಿನ್ನವಾದದ್ದಾಗಿದೆ.)

ಎರಡೂ ಮಾರ್ಗಗಳ ಪ್ರತಿಮಾಯೋಜನೆಯಲ್ಲಿ ಎದ್ದು ಕಾಣುವ ಮುಖ್ಯ ವ್ಯತ್ಯಾಸವೊಂದಿದೆ. ನವೋದಯ ಕವಿಗಳು ಹೆಚ್ಚಾಗಿ ಬಳಸುವ ಪ್ರತಿಮೆಗಳೆಲ್ಲವೂ

ಉಪಮೆ ಅಥವಾ ರೂಪಕಗಳು. ಕುವೆಂಪು ಮತ್ತು ಬೇಂದ್ರೆಯವರು ಕೆಲವು ಪ್ರತೀಕಗಳನ್ನು ಬಳಸಿರುವರಾದರೂ ಅವರೂ ಸೇರಿದಂತೆ ನವೋದಯರೆಲ್ಲ ಸದೃಶ ಚಿತ್ರಗಳನ್ನು ಬಳಸಿರುವುದೇ ಹೆಚ್ಚು. ಸದೃಶ ಚಿತ್ರಗಳಲ್ಲಿ ಹೋಲಿಕೆಯ ಜೊತೆಗೆ ಹೋಲಿಕೆಗೊಂಡ ವಿಷಯ ಅಥವಾ ಅನುಭವವೂ ಸೂಚಿತವಾಗಿರುವುದರಿಂದ ಪ್ರತಿಮೆಯಿಂದ ಹೊರಡಬಹುದಾದ ಅರ್ಥಧ್ವನಿಗಳ ದಿಕ್ಕು ಸ್ಪಷ್ಟವಾಗಿ ನಿರ್ದೇಶಿತ ವಾಗಿರುತ್ತದೆ. ಆದ್ದರಿಂದ ಕವಿತೆಯ ಅರ್ಥಧ್ವನಿಗಳು ಸಹೃದಯನಿಗೆ ಹೆಚ್ಚು ಕ್ಲೇಶ ವಿಲ್ಲದೆ ಸಂವಹನಗೊಳ್ಳುತ್ತವೆ. ನವ್ಯರು ವಿಶೇಷವಾಗಿ ಬಳಸುವುದು ರೂಪಕ ಮತ್ತು ಪ್ರತೀಕಗಳನ್ನು. ರೂಪಕಗಳೂ ಸಹ ಕವಿತೆಯ ಒಡಲನ್ನು ಹೆಣೆಯುವ ಎಳೆಗಳಾಗಿ ಬಂದಿರುತ್ತವೆಯೇ ಹೊರತು ಒಟ್ಟು ಕವಿತೆ ಪ್ರತೀಕವೇ ಆಗಿರುತ್ತದೆ. ಪ್ರತೀಕಕ್ಕೆ ಒಂದು ವಾಚ್ಯಾರ್ಥವೇನೋ ಇರುತ್ತದೆಯಾದರೂ ಧ್ವನಿಯ ನೆಲೆಯಲ್ಲಿ ಅದು ಒಂದಕ್ಕಿಂತ ಹೆಚ್ಚು ಅನುಭವಗಳನ್ನು ಸಂಕೇತಿಸುತ್ತದೆ. ಬರೆಯುವ ಹೊತ್ತಿನಲ್ಲಿ ಸ್ವತಃ ಕವಿಯೇ ಉದ್ದೇಶಿಸಿಲ್ಲದ ಅನುಭವಗಳಿಗೂ ಅದು ವ್ಯೆಯಾಗಬಲ್ಲದು. ಈ ಗುಣ ಪ್ರತೀಕಕ್ಕಿರುವ ಒಂದು ಸಾಮರ್ಥ್ಯವಾಗಿರುವಂತೆಯೇ ಅದು ಹೆಚ್ಚು ಜನಗಳಿಗೆ ಸಂವಹನಗೊಳ್ಳಲು ಒಂದು ಅಡ್ಡಿಯೂ ಆಗುತ್ತದೆ. ಪ್ರತೀಕಕ್ಕೆ ಹಲವು ಧ್ವನಿಮುಖಗಳಿದ್ದರೂ ಉಪಮೆ ರೂಪಕಗಳಲ್ಲಿರುವಂತೆ ಧ್ವನಿಯ ದಿಕ್ಕನ್ನು ಕುರಿತು ಸ್ಪಷ್ಟ ಸೂಚನೆ ಇರುವುದಿಲ್ಲವಾಗಿ ಅನೇಕರ ಪಾಲಿಗೆ ಅದು ಗೂಢವಾಗಿ ಉಳಿದುಬಿಡುತ್ತದೆ. ಇದನ್ನು ಒಂದು ಉದಾಹರಣೆಯ ಮೂಲಕ ಸ್ಪಷ್ಟಪಡಿಸಿಕೊಳ್ಳಬಹುದೇನೋ. "ಅಲ್ಲಿ ಭಾವದ ಬೆಂಕಿಹಕ್ಕಿಯು ಮಿಂಚುರೆಕ್ಕೆಯನೇರುವೆ" ಎನ್ನುವುದು ಒಂದು ರೂಪಕ. ಸದೃಶಚಿತ್ರವಾದುದರಿಂದ ಇಲ್ಲಿ ವಿವಕ್ಷಿತಾರ್ಥದ ಕಡೆಗೆ ನಿರ್ದೇಶನವಿದೆ. ಕವಿ ತನ್ನ ಭಾವನಾವಿಹಾರವನ್ನು ಬೆಂಕಿಹಕ್ಕಿಯ ಮಿಂಚುರೆಕ್ಕೆಯನ್ನೇರಿ ನಡೆಸುವ ಪಯಣವಾಗಿ ಹೇಳುತ್ತಿದ್ದಾನೆ ಎನ್ನುವುದು ತಿಳಿಯುತ್ತದೆ. ದಿಟ್ಟವಾದ ಪ್ರತಿಮೆಯೊಂದರಿಂದ ಕವಿಯ ಅಭಿವ್ಯಕ್ತಿ ಮೂರ್ತವಾಗುತ್ತ, ಮನೋಹರವಾಗುತ್ತ, ಅರ್ಥಕ್ಕೆ ಧ್ವನಿ ವಲಯವನ್ನು ಕಲ್ಪಿಸಿಕೊಡುತ್ತ ಆಕರ್ಷಕವಾಗಿದೆ. ಈ ಪಯಣ ಕವಿಯ ಭಾವನಾ ವಿಹಾರಕ್ಕೆ ಸಂಬಂಧಿಸಿದ್ದು ಎಂಬ ಸೂಚನೆ ಪ್ರತಿಮೆಯಲ್ಲೇ ಅಡಕವಾಗದೆ ಹೋಗಿದ್ದಲ್ಲಿ ಅದು ಪ್ರತೀಕವಾಗಿ ವರ್ತಿಸುತ್ತಿತ್ತು. ಆದರೆ ಬೆಂಕಿ ಹಕ್ಕಿಯ ಮಿಂಚುರೆಕ್ಕೆಯೇರಿ

ಸೂಚಿಸುವ ಪಯಣ ಯಾವ ಅನುಭವವನ್ನು ಸಂಕೇತಿಸುತ್ತದೆ ಎನ್ನುವುದು ಸುಲಭವಾಗಿ ತಿಳಿಯುತ್ತಿರಲಿಲ್ಲ. ತಿಳಿದ ಮೇಲೂ ಅದು (ಪ್ರಣಯಾನುಭವ, ಕಲಾನುಭವ, ಅನುಭಾವಾನುಭವ ಇತ್ಯಾದಿ) ಯಾವುದೇ ಅನುಭವವನ್ನು ಸೂಚಿಸಬಲ್ಲಷ್ಟು ಉದಾರವಾಗಿ ಬಿಡುವುದರಿಂದ ಅರ್ಥವ್ಯಾಪಕತೆಯನ್ನು ಪಡೆಯುತ್ತಲೇ ಅದರ ಅರ್ಥಪ್ರಾಂತ್ಯ ಹೆಚ್ಚು ಅಸ್ಪಷ್ಟವೂ ಆಗಿಬಿಡುತ್ತಿತ್ತು. ಕಾವ್ಯದ ಸಾಮಾನ್ಯ ಓದುಗನಿಗೆ ಈ ಅಸ್ಪಷ್ಟತೆ ಸಮಸ್ಯೆಯಾಗಿಬಿಡುತ್ತದೆ. ಹೀಗಿದ್ದರೂ ಒಮ್ಮೆ ಅದರ ಧ್ವನಿಯ ಸೂಚನೆ ಸಿಕ್ಕಿತೆಂದರೆ ಎಂದೆಂದೂ ನಮ್ಮನ್ನು ಸೆಳೆಯುತ್ತಲೇ ಇರಬಲ್ಲ ಶಕ್ತಿ ಪ್ರತೀಕಕ್ಕಿರುತ್ತದೆ ಎನ್ನುವುದೂ ಸುಳ್ಳಲ್ಲ. ಒಂದು ಅರ್ಥಕ್ಕೆ ಅದನ್ನು ಕಟ್ಟಿಹಾಕಿಲ್ಲದಿರುವುದರಿಂದ ಕಾಲಕಾಲಕ್ಕೆ ಅದರಲ್ಲಿ ಹೊಸಧ್ವನಿಗಳು ಚಿಗುರುತ್ತಲೇ ಇರಬಹುದು. ಎಂದೂ ಪೂರ್ತಿಯಾಗಿ ಬಿಚ್ಚಿಕೊಳ್ಳದೆ ಅಸ್ಪಷ್ಟ ಬೆಳಕಿನ ಉದ್ದೀಪಕ ಅಂತರದಲ್ಲೇ ನಿಂತು ಸದಾ ನಮ್ಮನ್ನು ಕಾಡುವ ಶಕ್ತಿ ಅದರದು.

ನವೋದಯ ಮತ್ತು ನವ್ಯಕವಿಗಳ ಪ್ರತಿಮಾಸ್ವರೂಪದಲ್ಲಿನ ಇನ್ನೊಂದು ವ್ಯತ್ಯಾಸವೆಂದರೆ ಅದನ್ನು ಕಟ್ಟಲು ಬಳಸಿರುವ ಭಾಷೆಗೆ ಸಂಬಂಧಿಸಿದ್ದು. ಈ ವ್ಯತ್ಯಾಸ ತುಂಬ ಎದ್ದು ಕಾಣುವಂಥದು. ಕೆಳಗಿನ ಕೆಲವು ಪ್ರತಿಮೆಗಳನ್ನು ಗಮನಿಸಿ.

ಮುಖ ಮೈ ಇಲ್ಲದ
ಬೆನ್ನುದೇವರ ಕಡಲೆ ಹೂಸಿನ ವಾಸನೆ[1]

ಇವಳ ಹೊಟ್ಟೆದರಂಡಿಗಾರು ಕುಕ್ಕಿದರಯ್ಯ ಕಳ್ಳ ಬಸುರಿನ ಯಾವ ಜಾಣ ರಂಭೆ?[2]

ಬೆನ್ನಿಗಂಟಿದ ಗಂಟು ತರುಡೊಡೆದ ತೀಟೆ.
ಕಂತಾರಿಡೀಸನ್ನು ಮುಕ್ಕಿದರು ಹಿಡಿ ಹಿಡೀ
ಸಡಿಲವಾಗದ ತೊಡೆಯ ಗೋರಿಮಾನ[3]

ದುಷ್ಟಾ
ನಿನ್ನ ಕೆತ್ತಿಸಿ ಬಡಿದೇನು ಗೂಟಾ
ಮೈಮ್ಯಾಲೆ ಏರಿ ಬಂದಿ
ಖಾಸಾ ಗಂಧರ್ವಪತಿಗಳ ಸಿದ್ಧಿ ಪ್ರಸಿದ್ಧಿ ಮಿಂಡ ಭಂಡತನಗಳ
ಮರತಿ[4]

ವಾತ ಪಿತ್ತ ಕಫ ಥಳಿ ಥಳುಕು
ಅತಿ ಭಾವುಕತೆ, ಪ್ರಾಸಕ್ಕೆ ದಾಸರಾಗುವುದು
ಅನಗತ್ಯ ಚಿತ್ತೋನ್ಮಾದ ಹಾಗೂ
ರಕ್ತನಾಳಗಳಲ್ಲಿ ಧ್ವನಿಸ್ಸನೊತ್ತದ [5]

ಉತ್ತಮ ಬಟಾಟೆಯಲಿ ಕಾಲಿಫ್ಲವರು ಬೆಳೆದ
ಹೊಲವು ಕಾಂಬ ಮೆದುಳಿಗಿದೆ ಛಿದ್ರರೋಗದ ರಾಹು
ಪುಪ್ಪಸಕೆ ರಾಜಯಕ್ಷ್ಮದ ಬಿರುಸು : ಹೃದಯಕ್ಕೆ
ರಕ್ತಾಣುವಿನ ಥ್ರಾಂಬೋಸಿಸ್ಸು, ಸ್ಕೀನಿನ ಮೀನು
ಕೂರ್ಮವಾಗಿಹುದಿಲ್ಲ [6]

ಬಿಸಿಲ ಬ್ರಾಂದಿಯ ಕುಡಿದ ಮರವಾಗಿಡ ನೆಳಲ ತಂಪಲ್ಲಿ
ಘಮುಗುಡುವ ಬೆದೆ ಮಣ್ಣವಾಸನೆಗೆ ಮೂಗರಳಿ
ತೃಪ್ತಿಯಿಲ್ಲದೇ ಕುದಿವೊಡಲ ಧಗೆ [7]

ಅನುಕ್ಷಿತದಂತೆಯೇ ನಾಲಗೆ ನರೆಯುತ್ತೆ
ಗಲ್ಲದ ಹಿಂದೆ ಕೂದಲು ನರೆಯುತ್ತೆ
ಪದ್ಮಭೂಷಣನ, ವೀರಯೋಧನ, ಪ್ರಧಾನಿಯ, ಹಜಾಮನ
ಅವಳ, ತೊಡೆ, ಕೂದಲು ಎಲ್ಲ ನರೆಯುತ್ತೆ
ಚಡ್ಡಿಯ ಕೂದಲು ನರೆಯುತ್ತೆ. [8]

ಮೇಲೆ ಉದಾಹರಿಸಿರುವ ಪ್ರತಿಮಾ ಭಾಗಗಳಲ್ಲಿ ನವ್ಯರು ಬಳಸಿರುವ ಕೆಲವು ಶಬ್ದಗಳು ಅವರ ಕಾವ್ಯಪದ್ಧತಿಯಲ್ಲೇ ಹೊಸದಾಗಿ ಬಂದು ಸೇರಿದವು. ಚಪ್ಪಲಿ ಚರಂಡಿ, ಚಡ್ಡಿ ಹೂಸುಗಳಂಥ ಅಸಹ್ಯವೆನಿಸುವ ಪದಗಳು, " ಕೆತ್ತಿಸಿ ಬಿಡಿದೇನು ಗೂಟಾ " ಎಂಬಂಥ ಗ್ರಾಮ್ಯ ಮಾತುಗಾರಿಕೆ, ಸಿಗರೇಟು ಅಲಾರಮ್ಮು, ಅರ್ಜೆಂಟುಗಳಂಥ ಇಂಗ್ಲಿಷ್ ಪದಗಳು, ಇಂಗ್ಲಿಷ್ ಪದಗಳಲ್ಲಿಯೂ ವೈದ್ಯವೃತ್ತಿ ಅರಿತವರಿಗಷ್ಟೇ ಹೆಚ್ಚು ಪರಿಚಿತವಾದ ಥ್ರಾಂಬೋಸಿಸ್ಸು, ಸ್ಕೀನು, ಕಂತಾರಿಡೀಸುಗಳಂಥ ಶಬ್ದಗಳು, ಮಿಂಡ ಕಳ್ಳಬಸುರು, ತರಡು, ಘಮುಗುಡುವ ಬೆದೆ, ತೊಡೆಯ ಗೋರಿಮಾನಗಳಂಥ ಲೈಂಗಿಕಾರ್ಥದ

ಶಬ್ದ ಪದಪುಂಜಗಳು, ಬ್ರಾಂದಿಯಂಥ ಆಕ್ಷೇಪಕರ ಪಾನೀಯದ ಹೆಸರು — ಇವುಗಳಲ್ಲಿ ಯಾವುದೊಂದೂ ಐವತ್ತರ ಹಿಂದಿನ ದಶಕದ ನವೋದಯ ಕವಿಗಳಲ್ಲಿ ಬರುವುದು ಸಾಧ್ಯವಿರಲಿಲ್ಲ. ಅವರು ಕಾವ್ಯವನ್ನು ಶಿಷ್ಟಸಂವೇದನಗಳ ಅಭಿವ್ಯಕ್ತಿಗೆ ಮಾತ್ರ ಮೀಸಲಾದ ಪ್ರಕಾರವೆಂಬಂತೆ ಬಳಸಿದವರು. ಪ್ರಾಕೃತ ಇಲ್ಲವೆ ಲೈಂಗಿಕ ಅನುಭವಗಳ ನಿರೂಪಣೆ ಅವರ ಕಾವ್ಯದಲ್ಲಿ ತೀರ ಕಡಮೆ. ತಮ್ಮ ಅನುಭವ ಪ್ರಾಂತ್ಯದ ಹರವು ವಿಶಾಲವಾಗಿದ್ದರೂ ಸಾಮಾಜಿಕ ಘನತೆ ಗಾಂಭೀರ್ಯಗಳಿಗೆ ಅಡ್ಡಿಯಾಗದೆಂದು ಅನ್ನಿಸಿದವುಗಳನ್ನು ಮಾತ್ರ ಅವರು ಕಾವ್ಯದಲ್ಲಿ ಚಿತ್ರಿಸಿದ್ದಾರೆ. ಗ್ರಾಮಜೀವನದ ಪ್ರಾಣಮಿಡಿಯುವ ಪ್ರಾಕೃತ ಅನುಭವಗಳನ್ನು ತಮ್ಮ ಕಾದಂಬರಿಗಳಲ್ಲಿ ಅದ್ಭುತವಾಗಿ ಸೃಷ್ಟಿಸಿಕೊಟ್ಟ ಕುವೆಂಪು ಅವರೂ ಅಂಥವನ್ನು ತಮ್ಮ ಕಾವ್ಯದಲ್ಲಿ ತರದಿದ್ದುದು ಗದ್ಯಪದ್ಯಗಳಿಗೆ ಸಂಬಂಧಿಸಿದಂತೆ ನವೋದಯರು ರೂಪಿಸಿಕೊಂಡಿದ್ದ ದೃಷ್ಟಿಯನ್ನು ಸೂಚಿಸುತ್ತದೆ. ಎಲ್ಲ ಅನುಭವವೂ ಕಾವ್ಯಕ್ಕೆ ವಸ್ತುವಾಗಬಲ್ಲದೆಂದ ಮೇಲೆ ಅವುಗಳನ್ನು ವಿವರಿಸಲು ಬೇಕಾದ ಪದಗಳೆಲ್ಲವೂ ಕಾವ್ಯದಲ್ಲಿ ಬರಲು ತೊಂದರೆಯಿಲ್ಲವೆಂದು ನವ್ಯರು ಭಾವಿಸುತ್ತಾರೆ. ಹಾಗೆಂದೇ ಎರಡೂ ಮಾರ್ಗಗಳ ಭಾಷೆಯಲ್ಲಿ ಸ್ಪಷ್ಟವಾದ ವ್ಯತ್ಯಾಸವಿದೆ. ಇದರ ಪರಿಣಾಮ ಅವುಗಳ ಪ್ರತಿಮಾ ಶರೀರದಲ್ಲಿಯೂ ಕಾಣುತ್ತದೆ.

ನವೋದಯರು ಸೃಷ್ಟಿಸುವ ಪ್ರತಿಮೆಗಳೆಲ್ಲವೂ ಸಾಮಾನ್ಯವಾಗಿ ನಿರ್ದಿಷ್ಟ ಸಂಖ್ಯೆಯ ನಿಯತಗಣ ಪಾದಗಳಿಂದ ಕಟ್ಟಿದ, ತಾಳಲಯಬದ್ಧವಾದ ಭಾಷೆಯಲ್ಲಿ ರೂಪ ಪಡೆದವು. ಸಂಗೀತದ ಸಾಹಚರ್ಯವನ್ನು ಅಪೇಕ್ಷಿಸುವ ನಡಿಗೆ ಅವರ ಕಾವ್ಯದ್ದು. ಅಲ್ಲಿ ಅರ್ಥಕ್ಕೆ ಅಗತ್ಯವಿಲ್ಲದೆಯೂ ಲಯದ ನಿರ್ವಹಣೆಯ ಸಲುವಾಗಿಯೇ ಕೆಲವು ಪದಗಳು, ಪ್ರತ್ಯಯಗಳು ಛಂದೋಪೂರಣಗಳು ಕವಿತೆಯೊಳಗೆ ನುಸುಳುವುದು ಸಾಧ್ಯವಿದೆ. ಒಂದು ಪ್ರತಿಮೆ ನಿರ್ಮಾಣದಲ್ಲಿ, ಲಯವೇ ಕಾರಣವಾಗಿ ಇಂಥ ನಿರರ್ಥಕ ಪದಗಳು ಪ್ರತ್ಯಯಗಳು ಸೇರಿದಾಗ ಪ್ರತಿಮೆಯ ಕಟ್ಟಡ ಸಡಿಲವಾಗುತ್ತದೆ. ನವ್ಯ ಕವಿಗಳು ಅರ್ಥಾಪೇಕ್ಷಿಯಲ್ಲದ ಪದವನ್ನು ಲಯನಿರ್ವಹಣೆಗೇ ತೊಂದರೆಯಾಗುವ ಹೊತ್ತಿನಲ್ಲಿಯೂ ಕೈಬಿಡುತ್ತಾರೆ. ಕವಿತೆಯ ಸಾಲುಗಳು ಅವರಲ್ಲಿ ಲಯಬದ್ಧವಾಗಿರುವಾಗಲೂ ಅನಿರ್ದಿಷ್ಟ ಸಂಖ್ಯೆಯ ಗಣಗಳಿಂದ ಕೂಡಿರುತ್ತವೆ. ಇನ್ನು ಆಡುಮಾತಿನ ಲಯವನ್ನೇ ಪ್ರಧಾನವಾಗಿಟ್ಟುಕೊಂಡ ಕಡೆಯಲ್ಲಿಯಂತೂ ಅವರಿಗೆ ಹೆಚ್ಚು

ಸ್ವಾತಂತ್ರ್ಯವಿರುತ್ತದೆ. ಇದರಿಂದ ಅವರ ಪ್ರತಿಮೆಗಳ ಕಟ್ಟಡ ಹೆಚ್ಚು ಬಿಗಿಯಾಗಿರುತ್ತದೆ. ಆಡುಮಾತಿನ ಲಯವನ್ನು ಅವರು ಬಳಸಿರುವ ನಿದರ್ಶನಗಳಲ್ಲಿ ಇದು ಸ್ಪಷ್ಟವಾಗಿ ಕಾಣುತ್ತದೆ.

ಇರುಳು ಚಾಪೆ ಹಾಸುತ್ತಲೇ ಬರುತ್ತದೆ
ಹಗಲು ಸುತ್ತಿ ಸುರುಳಿ ಮಾಡುತ್ತಲೇ ಇರುತ್ತದೆ[9]

ಬರಿಗೊಡಗಳಿಗೆ ಸಮಾಧಾನ ಹೇಳುತ್ತಿದೆ ನೀರಿಲ್ಲದ ನಲ್ಲಿ
ಮಟ ಮಟ ಮಧ್ಯಾಹ್ನದಲ್ಲಿ

ಬಾಂದಳದ ವಿಮಾನ
ಅದೆಷ್ಟು ನಿಧಾನ?
ದಾರವಿಲ್ಲದ ಸೂಜಿ ನಾಟಿದೆ ನೀಲಿಬಟ್ಟೆಯಲ್ಲಿ[10]

ಬೆಳ್ಳಗಿದ್ದುದು ಬೆಳ್ಳಿಯೆಂದು ಭ್ರಮಿಸಿ
ಅನಂತರ ಮುದುಡಿಕೊಳ್ಳುವ ಸಿಂಬಳ ಹುಳುಗಳು ನಾವು[11]

ಬೆಳೆಯುವುದು ನನ್ನ ಬೀಜಗೊಳಿಸಿ ಅಳಿಸಿ
ಬಿಳಲನ್ನೊತ್ತಿ ಪದ್ಯ
ಆಗ ಋತುಗಳ ನಡುವಿನ ನದಿಯ ವೈವಿಧ್ಯ
ಕೂತರೆ ಅಲ್ಲಾಡಿಸದ ಬರೀ ಭಾವಗಳ ಅವಶತೆ
ನೀರೆರೆದುಕೊಂಡು ನೀರೆಯುಡುವುದು ಕವಿತೆ[12]

ಗಿರಗಿರನೆ ತಿರುಗಿತ್ತು ಅಗ್ನಿಗೋಳದ ಬುಗುರಿ
ಶೂನ್ಯ ಸಿಂಹಾಸನದಿ ಜ್ಯೋತಿರ್ಲಿಂಗ
ಜಡೆಯು ಜ್ವಾಲೆಗೆ ಬೆದರಿ ಮತ್ತೊಮ್ಮೆ ಸ್ಪಂದಿಸಿತು
ಈ ವಿಶ್ವರಂಗ[13]

ಮೇಲಿನ ಪ್ರತಿಮಾಭಾಗಗಳಲ್ಲಿ ಕಡೆಯದೊಂದನ್ನು ಬಿಟ್ಟು ಉಳಿದ ಯಾವುದರಲ್ಲೂ ಯಾವ ಸಾಲೂ ನಿಯತಲಯದಲ್ಲಿಲ್ಲ. ಆದರೂ ಅವುಗಳನ್ನು ಸಮರ್ಪಕವಾಗಿ ಓದಿಕೊಂಡಾಗ ಅವುಗಳಲ್ಲಿ ಹಾಡಿಗೆ ಒಗ್ಗದ, ಆದರೆ ವಾಚನಕ್ಕೆ ಒಗ್ಗುವ ಒಂದು ಲಯ ಇದೆ. ಇದು ಮಾತಿಗೆ ಹತ್ತಿರವಾದದ್ದು. ಕಡೆಯ ಪದ್ಯಭಾಗದಲ್ಲಿ ಮಾತ್ರಾಗಣಗಳನ್ನೇ

ಬಳಸಲಾಗಿದೆ. ಆದರೆ ಅವು ಪ್ರತಿಸಾಲಿನಲ್ಲೂ ನಿರ್ದಿಷ್ಟ ಸಂಖ್ಯೆಯಲ್ಲಿಲ್ಲ ಅಷ್ಟೇ. ಅರ್ಥಕ್ಕೆ ಅವಶ್ಯವಾದಾಗ ನವ್ಯರು ಗೀತಲಯವನ್ನೂ ಬಳಸುವುದುಂಟು. ಅಡಿಗರ 'ಕೃಷ್ಣನ ಕೊಳಲು' ಕವಿತೆಯ ಎರಡು ಮತ್ತು ಮೂರನೆಯ ಭಾಗಗಳು ಇದಕ್ಕೆ ನಿದರ್ಶನಗಳೆನ್ನಬಹುದು. ಅಂತೂ ಈ ಲಯವಿಧಾನದಲ್ಲಿ ಕವಿಗೆ ಸಿಗುವ ಸ್ವಾತಂತ್ರ್ಯ ಕವಿತೆಯ ಕಟ್ಟಡವನ್ನು ಹೆಚ್ಚು ಬಿಗಿಗೊಳಿಸಲು ಅವಕಾಶಕೊಡುತ್ತದೆ.

ನವೋದಯರಲ್ಲಿ ಬಹುಮಟ್ಟಿಗೆ ಇಲ್ಲವೇ ಎನ್ನಬಹುದಾದ ಕೆಲವು ಪ್ರತಿಮೆಗಳು ನವ್ಯರಲ್ಲಿ ವಿಶೇಷವಾಗಿ ಕಾಣುತ್ತವೆ. ಅವು ಸಮಾಜದಲ್ಲಿ ಅಶ್ಲೀಲ ಮತ್ತು ಅಸಹ್ಯ ಎಂದು ಗುರುತಿಸುವ ಅನುಭವಗಳಿಂದ ಕಟ್ಟಿದ ಪ್ರತಿಮೆಗಳು. ಈ ಸಾಮಾಜಿಕ ಪರಿಗಣನೆ ತನ್ನ ಮುಕ್ತ ಅಭಿವ್ಯಕ್ತಿಗೆ ಅಡ್ಡಿ ಎನ್ನಿಸುವುದರಿಂದ ನವ್ಯರು ಅವುಗಳನ್ನು ಅಲಕ್ಷಿಸಿದ್ದಾರೆ. ಹಾಗೆಂದೇ ಅವರಲ್ಲಿ —

ಗುಬ್ಬಕ್ಕಿ ಮೊಲೆ ಬಂದು ಮುದ್ದಾಡಿದುವು ಎದೆಗೆ
ಮುದಿರ್ದೊಲು ತೊಡೆ ಬಂದು ತೆಕ್ಕೆಯುಟ್ಟವು ತೊಡೆಗೆ

ಹೊಲದುದ್ದ ನಡೆದಿತ್ತು ನೇಗಿಲಮೊನೆ
ಬಸಿರೆಲ್ಲ ಬಿರಿದು ಜೊಲ್ಲುಕ್ಕಿ ಸುರಿದು
ಬಸಿದು ಹೊರಚೆಲ್ಲಿತ್ತು ಜೀವದ ಸೊನೆ [14]

• • • • • • • •

ತೆಕ್ಕೆಗೊಗ್ಗದ ಹಗಲುಗನಸಿನ ದಢೂತಿ ತೊಡೆ
ಸಿಕ್ಕದೇ ಸಿಕ್ಕಿದಂತಾಗಿ ತೂಬನು ತೆಗೆವ
ಸ್ವಪ್ನೇಂದ್ರಿಯದ ಸ್ವಯಂಚಾಲಕಕೆ ತಡೆಹಾಕು. [15]

• • • • • • • •

ಕುಡಿದು ಬಿಟ್ಟಿದೆ ಕಣ್ಣೋ ಕಡಲ ಪಡಖಾನೆಯಲಿ
ನೊರೆಗರೆವ ವಿಸ್ಕಿ ಸೋಡಾ [16]

ಕಣ್ಣಸುತ್ತ ಆ ಕಿಸುರು ಪಾಯಸ
ಕ್ಕೆ ನೊಳ್ಳ,
    ಹುಣ್ಣು ನವಿಲು ಬಣ್ಣದ ನೊಣಗಳಿಗೆ
ನಾಗಮುರಿ ಹೂವು [17]

ಎಂಬಂಥ ಪ್ರತಿಮೆಗಳೂ ದೊರೆಯುತ್ತವೆ.

(ನವ್ಯರ ಪ್ರತಿಮೆಗಳಲ್ಲಿ ಮಾತ್ರ ಕಾಣುವ ಕಡೆಯ ಒಂದು ಅಂಶವೆಂದರೆ ಭಾವದ ಸಾಂದ್ರೀಕರಣ. ತಾವು ಬಳಸುತ್ತಿರುವ ಮಾತಿನ ಅರ್ಥವನ್ನು ಪದ್ಯದ ಆಕಾರದಲ್ಲಿಯೂ, ಅದಷ್ಟು ಸಾಧಿಸಬೇಕೆಂಬ ದೃಷ್ಟಿಯಿಂದ ಹುಟ್ಟಿದ್ದು. ಇದು ಸಾರ್ಥಕವಾಗಿ ಬಳಕೆಯಾಗಿರುವುದೂ ಉಂಟು. ಹಾಗೆಯೇ ಅತಿಯಾಯಿತೆನಿಸುವಂತೆ ಕಾಣಿಸಿಕೊಂಡಿರುವುದೂ ಉಂಟು. "ಹಿಮಗಿರಿ ಕಂದರ ಕವಿತೆಯ ಕಡೆಯಲ್ಲಿ ಜೀ[illegible]ಯ ಎದೆಯೊಳದಾನೆ ದೂರವಾಗುತ್ತಿರುವ ರೈಲಿನ ಸದ್ದಿಗನುಗುಣವಾಗಿ ಮಂಜಿನಗಡ್ಡೆ ಬಿಸಿಲಿನಲ್ಲಿ ಮೆಲು ಮೆಲನೆ ಕರಗುವಂತೆ ಕರಗುವುದರ ಚಿತ್ರವಿದೆ." [18]

" ಹಿಮಗಿರಿಯ ಕಂದರ...
    ಗಿರಿಯ ಕಂದರ...
    ಕಂ. .. ದ... ರ...
        ದ... ರ...
        ... ರ.... "

• • • • • • • • • •

ಚಿಕ್ಕ ಮುಚ್ಚಿದ ಹಕ್ಕಿ ರೆಕ್ಕೆ ಸುಟ್ಟುದನರಿತು
ಬುವಿಗೆ
ದೊಪ್ಪನೆ
ಬಿತ್ತು
ಸತ್ತು

ಈ ಪ್ರತಿಮೆಯಲ್ಲಿ "... ಶರ್ಮರು ತಮ್ಮ ಅರ್ಥದ ಅಭಿವ್ಯಕ್ತಿಗೆ ಛಂದಸ್ಸನ್ನು ಅಳವಡಿಸಿಕೊಂಡಿದ್ದಾರೆ. . . ಬೀಳಿನ ಮತ್ತು ಸಾವಿನ ಅರ್ಥಕ್ಕೆ ಪದಪ್ರಮಾಣದ

ಪಂಕ್ತಿಗಳು ಎಷ್ಟು ಚೆನ್ನಾಗಿ ಹೊಂದುತ್ತವೆ"[19] ಎಂದು ವಿಮರ್ಶಕರು ಇದನ್ನು ಪ್ರಶಂಸಿಸಿದ್ದಾರೆ. ಆದರೆ ರಾಮಾನುಜನ್ ಮತ್ತು ಲಕ್ಷ್ಮಣರಾಯರಂಥ ಲೇಖಕರು ಈ ವಿಧಾನವನ್ನು ಒಂದು ಅತಿರೇಕದಲ್ಲಿ ಬಳಸಿರುವುದೂ ಉಂಟು.

ಮೇಲೆ ನಿರೂಪಿಸಿರುವ ಅಂಶಗಳು ನವೋದಯ ಕಾವ್ಯ ಮತ್ತು ನವ್ಯಕಾವ್ಯಗಳ ಪ್ರತಿಮಾ ನಿರ್ವಹಣೆಯಲ್ಲಿ ಕಾಣುವ ಮುಖ್ಯ ಅಂಶಗಳೆನ್ನುವುದು "ಆಧುನಿಕ ಕನ್ನಡ ಕಾವ್ಯದಲ್ಲಿ ಪ್ರತಿಮಾ ದೃಷ್ಟಿ" ಎಂಬ ವಿಷಯವನ್ನು ಕುರಿತು ಮಾಡಿರುವ ಈ ವ್ಯಾಸಂಗದಿಂದ ಕಂಡುಬರುತ್ತದೆ.

* * * * * * *

## ಅಡಿಟಿಪ್ಪಣಿಗಳು

1 ರಾಮಾನುಜನ್, ಪದವೆ ಇಲ್ಲದ ಪದ್ಯಕ್ಕೆ, ಹೊಕ್ಕುಳಲ್ಲಿ ಹೂವಿಲ್ಲ

2 ಅಡಿಗ, ಭೂಮಿಗೀತ, ಭೂಮಿಗೀತ

3 ರಾಮಚಂದ್ರಶರ್ಮ, ಹೇಸರಗತ್ತೆ, ಹೇಸರಗತ್ತೆ

4 ಚಂದ್ರಶೇಖರ ಕಂಬಾರ, ಮಾವೊತ್ಸೆ ತುಂಗ, ತಕರಾರಿನವರು

5 ಪೂರ್ಣಚಂದ್ರತೇಜಸ್ವಿ, ನವಯತ್ನ ಕಲ್ಪ ಅಥವಾ ನವ್ಯ ವಿಮರ್ಶಕನಿಗೆ, ಅಕ್ಷರ ಹೊಸ ಕಾವ್ಯ, (ಸಂ) ಪಿ ಲಂಕೇಶ

6 ವಿ ಕೃ ಗೋಕಾಕ, ವೈದ್ಯವಿದ್ಯಾಲಯ, ಊರ್ಣನಾಭ

7 ಅಲನಹಳ್ಳಿ ಶ್ರೀಕೃಷ್ಣ, ಮಣ್ಣು ಮಾಂಸದ ಹಾಡು, ಮಣ್ಣಿನ ಹಾಡು

8 ಪಿ ಲಂಕೇಶ, ದೇಶಭಕ್ತ ಸೂಳೇಮಗನ ಗದ್ಯಗೀತೆ, ತಲೆಮಾರು

9 ಚನ್ನವೀರ ಕಣವಿ, ಅವಲೋಕನ, ನಗರದಲ್ಲಿ ನೆರಳು

10 ಕೆ ಎಸ್ ನರಸಿಂಹಸ್ವಾಮಿ, ಬಂಗೊಡಗಳಿಗೆ ಸಮಾಧಾನ, ಶಿಲಾಲತೆ

11 ಬುದ್ದಣ್ಣ ಹಿಂಗಮಿರೆ, ನಿನ್ನ ಹೆಸರಿನಲ್ಲಿ, ಈ ನದಿಯ ಮಡಿಲಲ್ಲಿ

12 ನಿಸಾರ ಅಹಮದ, ಕವಿತೆ, ಸಂಜೆ ಐದರ ಮಳೆ

13 ಶಿವರುದ್ರಪ್ಪ, ಹುಟ್ಟಿದ ಹಬ್ಬ, ನನ್ನ ನಿನ್ನ ನಡುವೆ

14 ಗಂಗಾಧರ ಚಿತ್ತಾಲ, ಕಾಮಸೂತ್ರ, ಹರಿವ ನೀರಿದು

15 ಅಡಿಗ, ಪ್ರಾರ್ಥನೆ, ಭೂಮಿಗೀತ

16 ಅಡಿಗ, ಗೊಂದಲಪುರ, ಚಂಡೆಮದ್ದಳೆ

17 ರಾಮಾನುಜನ್, ಕಲೆ ಮತ್ತು ಜೀವನ ಸೌಂದರ್ಯ, ಹೊಕ್ಕುಳಲ್ಲಿ ಹೂವಿಲ್ಲ

18 ಕೆ ನರಸಿಂಹಮೂರ್ತಿ, ಮುನ್ನುಡಿ, ಚಂಡೆಮದ್ದಳೆ

19 ಕೆ ನರಸಿಂಹಮೂರ್ತಿ, ಮುನ್ನುಡಿ, ಏಳುಸುತ್ತಿನಕೋಟೆ

# ಗ್ರಂಥಋಣ

## ಈ ಪ್ರಬಂಧವನ್ನು ಸಿದ್ಧಪಡಿಸುವಾಗ ಬಳಸಿಕೊಂಡ ಗ್ರಂಥಗಳು ಮತ್ತು ಪತ್ರಿಕೆಗಳು


Abrams, M.H. — English Romantic poets, London, 1974
Modern Essays in criticism

Allen, Hervey — (ed) The complete Tales and poems of Edgar Allan poe, Newyork, The Modern Library, 1938.

Anderson, Charles R — American Literary Masters vol 1, Holt, Rinchart and Winston , Inc. 1965

Badkin — Studies of Type Images, Oxford University press, 1951.

Baker, James Voilent — The Sacred River , Theory of Imagination, Louisiana University press, 1957

Barth — The symbolic Imagination, 1977

Basler , Roy P — Sex symbol and psychology in Literature, New Brunswick, Rutgers University press, 1948

Beaty and Matchett — Poetry from Statement to meaning, Newyork, 1965.

Bilensen peter — Trans : Japanese Haiku

Bodkin , Maude — Archetypal patterns of poetry, Oxford.

Bowra, C.M. — The Creative Expériment, Macmillan, 1967

The Heritage of Symbolism, Macmillan, 1951

Brandeis, Irma. — The Ladder of vision, ( A study of Dante's comedy) , London, 1960

Brooks, Cleanth. — Modern poetry and the Tradition, Chapel Hill , 1939

Brooks, Cleanth and Warren, Austene. — Understanding poetry, New York, Henry Holt and company, 1938

Brown , Frederik — The Impersonation of Angels: A Biography of Jean cocteau, New York, 1968

Brown, Hornstein percy — The Readers companion to world Literature, Mentar Book, 1956

Butler, Christopher and Fowler, Alastair — Topics in Criticism, London, Long Man Group Ltd, 1971

Cassirer — Language and Myth, Tr: Susane Langer, Newyork, 1946.
The philosophy of symbolic forms, New Haven, 1953.

Clemens — Development of Shakespear's Imagery, London, 1951

Coburn, Kathleen — (Ed) The collected works of S.T.Coleridge, Princeton, 1972.

Cocteau, Jean — Two Screen plays, Tr: Carol Martin Sperry, Newyork, 1968.

Cohen, J.M. — Poetry of This Age 1908 - 1965, 1960.

Coleridge, S.T. — Biographia Literaria, 2 vols, (Ed) : J.Shaw cross, Oxford.

Donald A. Stauffer — The Golden Nightingales Macmilhan, 1949.

Eliot, T.S. — Literary Essays of Ezra Pound, (Ed) London, Faber & Faber.
Selected Essays, Faber & Faber, 1969.
To criticize the critic, Faber & Faber, 1965.

Feder, Lillian — Ancient Myth in Modern poetry, Princeton, 1971.

Ford, Boris — (Ed) The pelican Guide to English Literature,
Vols: 3: From Donne to Marvall
5: From Blake to Byron
7: The Modern Age,
penguin books.

Frey, Northrop — The stubborn structure, London, 1970.
Secular Scripture, London, 1973.

Gilkes, Martin — A key to Modern English poetry, London, 1948

Gilman, Margaret — The Idea of poetry in France, Harvard University press, 1958.

Gokak, Vinayaka Krishna — An Integral view of poetry, New Delhi, 1975.

Govindan, M. — (Ed) Poetry and Renaissance, 1974.

Hough, Graham — An Essay on Criticism, Bristol, 1966.

Heuseman, A.E. — Selected Prose (Ed) John Carter, Cambridge, 1961.

Hulme, T.E. — Speculations (Ed) Herbert Read.

Hutchinsen, Themas and Milferd, Humphrey — (Ed) The complete works of P.B.Shelly, Oxford University press, 1945.

Issacs, J. — The Background of Modern poetry, 1951.

James, Henry — Future of the Novel - Essays on the Art of Fiction - (Ed) Leon Edel, 1956.

Jones, Mansell — The Background of Modern French poetry.

James Volant Baker — The Sacred River.

Kenner, Hugh — The poetry of Ezra Pound, London, Faber & Faber.

Kesambi, D.D. — Myths and Reality, Pepular Prakashana, 1962.

Kestler Arthur — The Act of creation, picador, 1978.

Langer, K.Susanne — Feeling and Form , Newyork, 1953

Philosophy in a New key, Cambridge, 1942

Leavis, F.R — Common pursuit, London, 1952

New Bearings in poetry penguin, 1967

The Great Tradition, penguin

Lemon, T.Lee and Reis J. Marion — (Trs) Russian Formalist criticism, 1965

Leslie Griggs, Earl — Ed. Collected Letters of Samual Taylor Coleridge (1956 - 59)

Lewis, C.D. — The Poetic Image, Jonathan cape, 1958

Lubbock — The craft of Fiction, London, 1921

Macdonell, A.A. — The Brhad Devata, part I & II, 1965

Macleish, Archibald — Poetry and Experience, London, 1961

Macnice, Louis — Modern Poetry, 1968

Macqueen, John — Allegory - John D.Jump - Gen Ed; London, 1970

Maxwell — The poetry of T.S.Eliot, London, 1954

May, Rollo (Ed) Symbolism in Religion and Literature, Newyork, 1960

Mayne, Jonathan (Ed) The Mirror of Art, critical studies by C.Baudelaire, 1956

Murray, John Middleton — Countries of the Mind, London, 1937
The Problems of style, London, 1956

Norman, Charles (Ed) Poets on Poetry, Newyork, 1965

Nostrad, Albert D.Van (Ed) Literary criticism in America, Newyork, 1957

Paige, D.D. — The Selected Letters of Ezra Pound, Faber & Faber, 1950

Peyre, Henri (Ed) Baudelaire - A Cooection of critical Essays, Prentice Hall, Inc., Englewood Clibbs,N.J., 1962

Poe, Edgar Allen — The complete poetry and selected criticism - (Ed) Allentate

Pound, Ezra — The ABC of Reading , Norfolk, conn. 1951

Punekar, Shankar Mokashi — The Latter phase in the Development of W.B. Yeats, Karnataka University Dharwar, 1966

Quintilian — Institutes, BK viii

Raymond , Marcel — From Baudelaire to Surrealism, (Tr) G.M., 1949

Read, Herbert — Form in Modern Poetry, 1950

Regan, Robert — (Ed) Poe - (Collection of critical Essays), prentice - Hall, Inc. Englewood cliffs, N.J.1967

Rene Wellek and Austin Warren — Theory of Literature, Penguin Books, 1963

Richards, I.A. — Principles of Literary criticism, London, Rout ledge & Kegan Paul Ltd., 1950

Coleridge on the Imagination, Newyork, Harcourt, Brace and company

Richards, I.A. — Practical Criticism, 1952

Riceeur, Paul — The Rule of Metaphor, (Tr):Robert C.Zerry, London and Henley, 1978

Rolle May — (ed) Symbolixm in Religion and Literature

Rudd, Margaret — Divided Image, 1953

Samuel, Viscount, — Ch. English Poetry of To-day, (Literature and Life) Second volume

Shakesphere, William — The complete works of William Shakesphere, London, Odhams press Ltd. Long Acre.

Spurgeon, Caroline F.E. — Shakesphere's Imagery and what its tells us, Cambridge, 1935

Sreenivasa Iyengar, K.R. — Introduction to the study of Literature.

Sutton, Walter — (Ed) Ezra Pound, A Collection of Critical Essays, New Jersey, 1963

Symons, J.A. — The Study of Dante, 1906

Tate, Allen — American Literary Masters, Vol.1., Holt, Rinehart and Winston, Inc. 1965

Tillich, Paul — Dynamics of faith, World prespective, vol.10., Newyork, 1956

Tillyard, E.M.W. — Poetry, Direct and obliane, London, 1959

Tindall, William York — The Literary Symbol, Indiana University Press, 1962

Trilling, Lionell — Literary Criticism (An Introductory Reader), Holt, Rinehert and Winston, Inc., 1970

The Experience of Literature : Poetry

Welleck, Rene — A History of Modern Criticism,
vol.1. The Later Twenteenth century, 1966
2. The Romantic Age, 1966
4. The Later Nineteenth century, 1970
5. The Twentieth century.
London, Jonathan cape.

Welleck, Rene and Warren, Austene — Theory of Literature, penguin Books, 1956

Whally, George — Poetic Process, London, Reutledge & Kegan Paul Ltd., 1953

Williamson, George — A Readers Guide to Metaphysical Poets, 1967

Wilson,Raymond (Ed) A Coleridge Selection, London, Macmillan & co. Ltd. 1963

Wimsatt , William .K. and Brooks,Cleanth Literary Criticism (A short History) Oxford, 1964

Yeats,W.B. (Ed) Poems of William Blake, London, 1969

Yeats,W.B. A Vision

Zimmer, Heinrich Myths And Symbols in Indian Art and Civilization, (Ed)* Joseph campbell, Bellinger series - vi, 1963

Zielkovski Theodore Disenchanted Images, 1977

| | |
|---|---|
| 1 ಅಡಿಗ, ಗೋಪಾಲಕೃಷ್ಣ | ಭಾವತರಂಗ, ಕಾವ್ಯಾಲಯ, 1946<br>ಕಟ್ಟುವೆವು ನಾವು, ಅದೇ 1948<br>ನಡೆದು ಬಂದ ದಾರಿ, ಉಷಾ ಸಾಹಿತ್ಯ ಮಾಲೆ, 1952<br>ಚಂಡೆಮದ್ದಳೆ, ಅಕ್ಷರ ಪ್ರಕಾಶನ, 1965<br>ಭೂಮಿಗೀತ, ಅದೇ, 1972<br>ವರ್ಧಮಾನ, ಅದೇ, 1972<br>ಸಮಗ್ರಕಾವ್ಯ, ಸಾಕ್ಷಿಪ್ರಕಾಶನ, 1976<br>ಸಮಗ್ರ ಗದ್ಯ, ಅದೇ, 1977 |
| 2 ಅನಂತನಾರಾಯಣ, ಎಸ್. | ಹೊಸಗನ್ನಡ ಕವಿತೆಯ ಮೇಲೆ ಇಂಗ್ಲಿಷ್ ಕಾವ್ಯದ ಪ್ರಭಾವ, ಗಂಗಾತರಂಗ, 1962 |
| 3 ಅನಂತಮೂರ್ತಿ, ಯು.ಆರ್. | ಪ್ರಜ್ಞೆ ಮತ್ತು ಪರಿಸರ, ಅಕ್ಷರಪ್ರಕಾಶನ, 1976 |
| 4 ಎಕ್ಕುಂಡಿ, ಸು.ರಂ. | ಸಂತಾನ, ಕಾವ್ಯಪ್ರಕಾಶನ ಸಮಿತಿ, 1953<br>ಹಾವಾಡಿಗರ ಹುಡುಗ, ಅಕ್ಷರ ಪ್ರಕಾಶನ, 1967 |
| 5 ಕಂಬಾರ, ಚಂದ್ರಶೇಖರ, ಬಿ. | ಹೇಳತೇನ ಕೇಳ, ಸಹ್ಯಾದ್ರಿ ಪ್ರಕಾಶನ, 1964<br>ತಕರಾರಿನವರು, ಅಕ್ಷರ ಪ್ರಕಾಶನ, 1970<br>ಸಾವಿರದ ನೆರಳು, ಅದೇ. 1979 |

| | |
|---|---|
| ೬ ಕಣವಿ ಚೆನ್ನವೀರ | ನೆಲಮುಗಿಲು, ಶಾರದಾಮಂದಿರ, 1965 |
| | ಮಣ್ಣಿನ ಮೆರವಣಿಗೆ, ಶಾರದಾ ಪ್ರಕಟನಾಲಯ, 1960 |
| | ಎರಡು ದಡ, ಗೀತಾಬುಕ್ ಹೌಸ್, 1969 |
| | ನಗರದಲ್ಲಿ ನೆರಳು, ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, 1974 |
| ೭ ಕಾಪಸೆ, ಜಿ.ಎಸ್. | ಮಧುರಚೆನ್ನ |
| ೮ ಕುರ್ತಕೋಟಿ, ಕೀ.ಡಿ. | ಭೃಂಗದ ಬೆನ್ನೇರಿ |
| ೯ ಕುವೆಂಪು | ಶ್ರೀ ರಾಮಾಯಣ ದರ್ಶನಂ, ಕನ್ನಡ ಅಧ್ಯಯನ ಸಂಸ್ಥೆ, 1971 |
| | ಷೋಡಶಿ, ಕಾವ್ಯಾಲಯ, 1947 |
| | ನವಿಲು, ಉದಯರವಿಪ್ರಕಾಶನ, 1958 |
| | ಪಕ್ಷಿಕಾಶಿ, ಉದಯರವಿಪ್ರಕಾಶನ, 1963 |
| | ಕೃತ್ತಿಕೆ, ಅದೇ, 1971 |
| | ಕೋಗಿಲೆ ಮತ್ತು ಸೋವಿಯಟ್ ರಷ್ಯ, ಅದೇ, 1966 |
| | ಪಾಂಚಜನ್ಯ, ಅದೇ, 1969 |
| | ಚಿತ್ರಾಂಗದಾ, ಅದೇ, 1973 |
| | ಚಂದ್ರಮಂಚಕೆ ಬಾ ಚಕೋರಿ, ಅದೇ, 1969 |
| | ತಪೋನಂದನ, ಅದೇ, 1959 |
| | ದ್ರೌಪದಿಯ ಶ್ರೀಮುಡಿ, ಅದೇ, 1967 |
| | ರಸೋವೈಸಃ, ಅದೇ, 1962 |
| ಕೃಷ್ಣಕುಮಾರ್, ಸಿ.ಪಿ. | (ಅನು) ಪಾಶ್ಚಾತ್ಯಕಾವ್ಯಚಿಂತನ, ಗೀತಾಬುಕ್‌ಹೌಸ್, 1970 |

11 ಕೃಷ್ಣಮೂರ್ತಿ, ಕೆ. — (ಅನು) ಕನ್ನಡ ಕಾವ್ಯಾದರ್ಶ

(ಅನು)···· ಕಾವ್ಯಾಲಂಕಾರ ಸೂತ್ರವೃತ್ತಿ

12 ಗೋಕಾಕ, ವಿ.ಕೃ. — ಪಯಣ, ಸುರುಚಿ ಪ್ರಕಾಶನ, 1978

ಊರ್ಣನಾಭ, ಶಾರದಾ ಪ್ರಕಟನಾಲಯ, 1961

ದ್ಯಾವಾಪೃಥಿವೀ, ಅದೇ, 1961

ಸಿಮ್ಲಾ ಸಿಂಫೋನಿ

ಸಮುದ್ರಗೀತಗಳು, ಸುರುಚಿ ಪ್ರಕಾಶನ, 1967

ನವ್ಯತೆ ಹಾಗೂ ಕಾವ್ಯಜೀವನ

13 ಗೋಕಾಕ, ವಿ.ಕೃ. ಮತ್ತು

14 ಚೆನ್ನವೀರ ಕಣವಿ — (ಸಂ) ನವ್ಯಧ್ವನಿ, ವಿಜಯಭಾರತಿ ಪ್ರಕಾಶನ, 1969

15 ಗೋಕಾಕ, ವಿ.ಕೃ. ಮತ್ತು

16 ಕುಲಕರ್ಣಿ, ಆರ್.ಜಿ. — (ಸಂ) ವಿಮರ್ಶಾ ತತ್ವಗಳು ಮತ್ತು ಪ್ರಾಯೋಗಿಕ ವಿಮರ್ಶೆ, ಐ.ಬಿ.ಹೆಚ್. ಪ್ರಕಾಶನ, 1980

17 ಗೋವಿಂದ ಪೈ, ಎಂ. — ಗೋಲ್ಗೊಥಾ ಮತ್ತು ವೈಶಾಖಿ

18 ಗೋವಿಂದ ಪೈ, ಎಂ.,

19 ಸೀತಾರಾಮಯ್ಯ, ವಿ. ಮತ್ತು

20 ಕಾರಂತ ಶಿವರಾಮ — (ಸಂ) ಪಂಜೆಯವರ ನೆನಪಿಗಾಗಿ

21 ಚಂದ್ರಕಾಂತ ಕುಸನೂರು — ನಂದಿಕೋಲು, ಸತ್ಯಸ್ನೇಹ ಪ್ರಕಾಶನ, 1967

೨೨ ಚಂದ್ರಶೇಖರ, ಪ.ವಿ., ಪರಶಿವಮೂರ್ತಿ, ಜ.ಶಿ. (ಸಂ) ಉಡುಗೊರೆ, ಮಹಾರಾಜಾ ಕಾಲೇಜ್, 1956

೨೩ ಚನ್ನಂತಯ್ಯ, ಎಚ್.ಎಂ. ಆವೆ

೨೪ ತಿರುಮಲೇಶ, ಕೆ.ವಿ. ಮಹಾಪ್ರಸ್ಥಾನ, ಅಕ್ಷರ ಪ್ರಕಾಶನ, 1971

ಮುಖಾಮುಖಿ, ನೆಲಮನೆ ಪ್ರಕಾಶನ, 1978

೨೫ ದೇಜಗೌ (ಸಂ) ಶ್ರೀರಾಮಾಯಣ ದರ್ಶನಂ, ಉಪನ್ಯಾಸಮಾಲೆ, ಸಾಹಿತ್ಯ ದರ್ಶನಮಾಲೆ, 1950

(ಸಂ) ಸಹ್ಯಾದ್ರಿ, ಕುವೆಂಪು ವಿದ್ಯಾವರ್ಧಕ ಸಂಘ, 1975

೨೬ ನರಸಿಂಹಸ್ವಾಮಿ, ಕೆ.ಎಸ್. ಮೈಸೂರು ಮಲ್ಲಿಗೆ

ಇರುವಂತಿಗೆ, ಕಾವ್ಯಾಲಯ, 1958

ಉಂಗುರ, ಅದೇ, 1960

ದೀಪದ ಮಲ್ಲಿ, ಅದೇ, 1955

ಶಿಲಾಲತೆ, ಅದೇ, 1958

ಮನೆಯಿಂದ ಮನೆಗೆ, ಅದೇ 1960

ತೆರೆದ ಬಾಗಿಲು, ಅದೇ, 1976

೨೭ ನರಸಿಂಹಾಚಾರ್, ಪು.ತಿ. — ಗಣೇಶ ದರ್ಶನ, ಶಾರದಾ ಮಂದಿರ, 1954

ರಸಸರಸ್ವತಿ, ಕಾವ್ಯಾಲಯ, 1955

೨೮ ನಾಡಿಗ ಸುಮತೀಂದ್ರ — ನಿಮ್ಮ ಪ್ರೇಮ ಕುಮಾರಿಯ ಜಾತಕ, ತರುಣ ಲೇಖಕರ ಪ್ರಕಾಶನ, 1964

ಕಪ್ಪು ದೇವತೆ, ಅಕ್ಷರ ಪ್ರಕಾಶನ, 1970

ಉದ್ಘಾಟನೆ, ಸುಮತಿ ಪ್ರಕಾಶನ, 1978

೨೯ ನಾಯಕ, ಹಾ.ಮಾ. — ಸಂಪುಟ, ಅಪರ್ಣಾ ಪ್ರಕಾಶನ, 1980

೩೦ ನಾಯಕ, ಹಾ.ಮಾ. ಮತ್ತು ಅನಂತಮೂರ್ತಿ, ಸಿಂಧುವಳ್ಳಿ — (ಸಂ) ವಿನಾಯಕ ವಾಙ್ಮಯ, ಸುರುಚಿ ಪ್ರಕಾಶನ, 1969

ನಿಸಾರ್ ಅಹಮದ್, ಕೆ.ಎಸ್. — ಮನಸು ಗಾಂಧಿಬಜಾರು, ವಿಚಾರ ವಾಹಿನಿ, 1960

ಸಂಜೆ ಐದರ ಮಳೆ, ಅಕ್ಷರ ಪ್ರಕಾಶನ 1970

ನಾನೆಂಬ ಪರಕೀಯ, ಅಕ್ಷರ ಪ್ರಕಾಶನ

ಪಟ್ಟಣಶೆಟ್ಟಿ, ಸಿದ್ಧಲಿಂಗ — ಔರಂಗಜೇಬ ಮತ್ತು ಇತರ ಕವನಗಳು, ಸಂಕ್ರಮಣ ಪ್ರಕಾಶನ, 1967

ಪರಮೇಶ್ವರ ಭಟ್ಟ, ಎಸ್.ವಿ. — (ಅನು) ಗಾಥಾ ಸಪ್ತಶತಿ, ಸರಸ ಸಾಹಿತ್ಯ ಪ್ರಕಾಶನ, 1966

ಬಾಲಸುಬ್ರಹ್ಮಣ್ಯ, ಎನ್. (ಅನು) ಅರಿಸ್ಟಾಟಲನ ಕಾವ್ಯಮೀಮಾಂಸೆ, ಕಾವ್ಯಾಲಯ, 1972

ಬೇಂದ್ರೆ, ದ.ರಾ. (ಅಂಬಿಕಾತನಯದತ್ತ) ಕೃಷ್ಣಕುಮಾರಿ ಮತ್ತು ಹಾಡು ಪಾಡು, ಸಮಾಜಪುಸ್ತಕಾಲಯ, 1956

ಗರಿ, ಅದೇ, 1960

ನಾದಲೀಲೆ, ಪ್ರತಿಭಾ ಗ್ರಂಥಮಾಲೆ, 1958

ಗಂಗಾವತರಣ, ಅದೇ, 1958

ಉಯ್ಯಾಲೆ, ಅದೇ, 1958

ಮೂರ್ತಿ ಮತ್ತು ಕಾಮಕಸ್ತೂರಿ, ಪ್ರತಿಭಾ ಮುದ್ರಣ, 1955

ಸಂಚಯ, ಅದೇ, 1959

ಸಖೀಗೀತ,

ವಿನಯ, ಗೀತಾಬುಕ್ ಹೌಸ್; 1972

ಭೈರಪ್ಪ, ಎಸ್.ಎಲ್. ಸಾಹಿತ್ಯ ಮತ್ತು ಪ್ರತೀಕ

ಮಧುರ ಚೆನ್ನ ನನ್ನ ನಲ್ಲ ಹಾಗೂ ಇತರ ಕವನಗಳು, ಮಧುರಚೆನ್ನರ ಸ್ಮಾರಕ ಸಮಿತಿ, 1955

ಮಾಸ್ತಿ ವೆಂಕಟೇಶ ಅಯ್ಯಂಗಾರ್ (ಶ್ರೀನಿವಾಸ) ಮಾಸ್ತಿಯವರ ಕಾವ್ಯ, 2, ಜೀವನ ಕಾರ್ಯಾಲಯ

ಮೋಕಾಶಿ ಶಂಕರ ಪುಣೇಕರ — ಮಾಯಿಯ ಮೂರು ಮುಖಗಳು
ಸುರಭಿ ಪ್ರಕಾಶನ, 1970

ರಾಜರತ್ನಂ, ಜಿ.ಪಿ. — ರತ್ನನ ಪದಗಳು, ವಿದೇಹ, 1977

ರಾಮದೇವ ಶೆಣೈ — (ಸಂ) ದೀವಿಗೆ

ರಾಮಾನುಜನ್, ಎ.ಕೆ. — ಹೊಕ್ಕುಳಲ್ಲಿ ಹೂವಿಲ್ಲ,
ಮನೋಹರ ಗ್ರಂಥಮಾಲಾ, 1969
ಮತ್ತು ಇತರ ಪದ್ಯಗಳು, ಅದೇ, 1977

ಲಂಕೇಶ್, ಪಿ — ತಲೆಮಾರು, ಅಕ್ಷರ ಪ್ರಕಾಶನ, 1973
(ಅನು) ಪಾಪದ ಹೂವುಗಳು, ನೆಲಮನೆ ಪ್ರಕಾಶನ, 1974
(ಸಂ) ಅಕ್ಷರ ಹೊಸಕಾವ್ಯ, ಅಕ್ಷರ ಪ್ರಕಾಶನ, 1970

ಲಕ್ಷ್ಮೀನಾರಾಯಣ ಭಟ್ಟ, ಎನ್.ಎಸ್. — ಹೊರಳು ದಾರಿಯಲ್ಲಿ ಕಾವ್ಯ, ಅಕ್ಷರ ಪ್ರಕಾಶನ, 1974
ವಿವೇಚನ, ಅಪರ್ಣಾ ಪ್ರಕಾಶನ, 1978

ಲಕ್ಷ್ಮಣರಾವ್, ಬಿ.ಆರ್. — ಗೋಪಿ ಮತ್ತು ಗಾಂಡಲೀನ, ಅಕ್ಷರ ಪ್ರಕಾಶನ, 1971
ಟುವಟಾರ, ಕ್ರೈಸ್ತ ಕಾಲೇಜ ಕನ್ನಡ ಸಂಘ, 1978

ವಸಂತಕುಮಾರ, ಎಂ.ಸಿ. — (ಸಂ) ಕುವೆಂಪು ಕಾವ್ಯಮೀಮಾಂಸೆ ಮತ್ತು ಸಾಹಿತ್ಯ ವಿಮರ್ಶೆ, ಶರತ್ ಪ್ರಕಾಶನ, 1972

ವೆಂಕಟೇಶಮೂರ್ತಿ, ಎಚ್.ಎಸ್. — ಸಿಂದಾಬಾದನ ಆತ್ಮಕಥೆ, ಕನ್ನಡ ಸಂಘ ಶೇಷಾದ್ರಿಪುರಂ ಕಾಲೇಜ್,
ಕ್ರಿಯಾಪರ್ವ, ಅದೇ, 1980

ಶರ್ಮ ರಾಮಚಂದ್ರ — ಹೇಸರಗತ್ತೆ

ಶಿವಪ್ರಕಾಶ (ಜಯಸುದರ್ಶನ) — ಇಲ್ಲದ್ದು, ವಾಗ್ದೇವಿ ಪ್ರಕಾಶನ ಮಂದಿರ, 1972

ಶಿವರುದ್ರಪ್ಪ, ಜಿ.ಎಸ್. — ಚೆಲುವು ಒಲವು, ತ.ವೆಂ.ಸ್ಮಾರಕ ಗ್ರಂಥಮಾಲೆ, 1953
ದೀಪದ ಹೆಜ್ಜೆ, ಜಿ.ಕೆ.ಅಂಡ್ ಬ್ರದರ್ಸ್, 1959
ನನ್ನ ನಿನ್ನ ನಡುವೆ, ತ.ವೆಂ.ಸ್ಮಾರಕ ಗ್ರಂಥಮಾಲೆ, 1975
ಸೌಂದರ್ಯ ಸಮೀಕ್ಷೆ, ಅದೇ, 1970

ಶಿವರುದ್ರಪ್ಪ, ಜಿ.ಎಸ್. ಮತ್ತು ಲಕ್ಷ್ಮೀನಾರಾಯಣಭಟ್ಟ, ಎನ್.ಎಸ್. — (ಸಂ) ಪ್ರಾಯೋಗಿಕ ವಿಮರ್ಶೆ, ಬೆಂಗಳೂರು ವಿಶ್ವವಿದ್ಯಾಲಯ, 1971

ಶ್ರೀಕಂಠಯ್ಯ, ತೀ.ನಂ. — ಒಲುಮೆ, ಶಾರದಾ ಮಂದಿರ, 1953
ಭಾರತೀಯ ಕಾವ್ಯಮೀಮಾಂಸೆ, ಮೈಸೂರು ವಿಶ್ವವಿದ್ಯಾನಿಲಯ, 1973

## ಹೆಚ್ಚಿನ ಪುಸ್ತಕಗಳು


ಅಲನಹಳ್ಳಿ ಶ್ರೀಕೃಷ್ಣ — ಮಣ್ಣಿನ ಹಾಡು, ಸಮೀಕ್ಷಕ ಪ್ರಕಾಶನ, 1966

ಕುವೆಂಪು — ಅಗ್ನಿಹಂಸ, ಉದಯರವಿ ಪ್ರಕಾಶನ

ಗಂಗಾಧರ ಚಿತ್ತಾಲ — ಹರಿವ ನೀರಿದು, 1970

ಪ್ರಭುಶಂಕರ — ಕನ್ನಡದಲ್ಲಿ ಭಾವಗೀತೆ, ಡಿ ವಿ ಕೆ ಮೂರ್ತಿ, 1966

ಬುದ್ದಣ್ಣ ಹಿಂಗಮಿರೆ — ಈ ನದಿಯ ಮಡಿಲಲ್ಲಿ, ಸಮಾಜಪುಸ್ತಕಾಲಯ, 1978

ರಾಮಚಂದ್ರ ಶರ್ಮ — ಹೇಸರಗತ್ತೆ
ಏಳುಸುತ್ತಿನ ಕೋಟೆ

ಲಕ್ಷ್ಮೀನಾರಾಯಣಭಟ್ಟ — ಸುಳಿ, ಅಕ್ಷರ ಪ್ರಕಾಶನ, 1974

ಶಂಕರ ಮೊಕಾಶಿ ಪುಣೇಕರ — ಶ್ರೀ ಬೇಂದ್ರೆಯವರ ಕಾವ್ಯಮೀಮಾಂಸೆ

ಹರಿದಾಸಭಟ್ಟ, ಕು ಶಿ ಮತ್ತು

ದಾಮೋದರರಾವ್, ಬಿ· — (ಸಂ) ಅಭಿವ್ಯಕ್ತಿ, ಕರ್ನಾಟಕ ಸಂಘ, ಉಡುಪಿ, 1968

Freud Sigmund — Psychopathology of Every day Life ed. A.A.Brill Comet Books, 1958
The Interpretation of Dreams Tr.&Ed. by James Strachey, George Allen & Unwin, 1955

Frye Northrop — Fables of Identity, Studies in poetic Mythology, Harcourt Brace & World, 1961

Lionell Trilling — (ed) Literary Criticism, Holt Rinehart and Winston, Inc. 1970

## ಸಾಹಿತ್ಯ ಪತ್ರಿಕೆಗಳು

ಆಲೋಕ (ಅಂಕಣ ಪತ್ರಿಕೆಯ ಆರಂಭದ ಸಂಚಿಕೆಗಳ ಹೆಸರು) : ಪಿ ಪಿ ಬಳಗದ ಬ
ಗೆಳೆಯರು, ಸಂಚಿಕೆ ಜುಲೈ 1979

ಗ್ರಂಥಲೋಕ; (ಸಂ) ಆರ್ ಎಲ್ ಅನಂತರಾಮಯ್ಯ, ಅಪರ್ಣಾ ಪ್ರಕಾಶನ, ಸಂಚಿಕೆಗಳು :
ಫೆಬ್ರವರಿ ಮತ್ತು ಮೇ 1980

ಸಮೀಕ್ಷಕ (ಸಂ) ಶ್ರೀಕೃಷ್ಣ ಆಲನಹಳ್ಳಿ

ಮನ್ವಂತರ, ಮನೋಹರ ಗ್ರಂಥಮಾಲೆ, ಸಂಪುಟ 2 1963